# ಪಾಬ್ಲೊ ನೆರೂಡ ಕವಿತೆಗಳು

**ಕನ್ನಡಕ್ಕೆ : ತೇಜಶ್ರೀ**

## ಸಾನೆಟ್ 16

ಹಿಡಿಮಣ್ಣು ಅಷ್ಟೆ ನೀನು, ಅದನ್ನು ಪ್ರೀತಿಸುತ್ತೇನೆ ನಾನು.
ಅದರಲ್ಲಿದೆ ಹುಲ್ಲುಗಾವಲ ಹರಹು, ಗ್ರಹಗಳ ವಿಸ್ತಾರ,
ಬೇರೆ ನಕ್ಷತ್ರಗಳಿಲ್ಲ ನನಗೆ. ದಿನದಿನ ಹಿಗ್ಗುವ ಒಂದು ನೂರಾಗುವ
ವಿಶ್ವದ ಪಡಿಯಚ್ಚು ನೀನು.

ಜಗದಗಲ ನಿನ್ನ ಕಣ್ಣುಗಳು ಅದರ ಬೆಳಕನ್ನಷ್ಟೆ ಬಲ್ಲೆ ನಾನು
ಅಳಿದು ಹೋಗಿರುವ ನಕ್ಷತ್ರಪುಂಜಗಳು ನನಗೆ ನೀಡಿರುವುದಿಷ್ಟೆ;
ನಿನ್ನ ಮೈ ಪುಲಕಿಸಿದೆ ಡವಡವಡವ ಕಂಪಿಸುತ್ತಿದೆ
ಮಳೆಯ ನಡುವೆ ಉಲ್ಕೆಯ ಹಾಗೆ ಚಿಮ್ಮುತ್ತಿದೆ.

ಬಾಗುವ ಬಳುಕುವ ನಿನ್ನ ನಿತಂಬ ಅವೆ ಚಂದಿರ ನನಗೆ;
ನಿನ್ನ ಬಾಯಿಬಾವಿ ನೀಡುವ ಸುಖದ ಅಮಲು ಸೂರ್ಯನಷ್ಟು ನನಗೆ;
ಧಗಧಗಿಸುತ್ತದೆ ಕೆಂಪುಕಿರಣಗಳಿಂದ ನಿನ್ನ ಹೃದಯ

ಆಹ, ಅದೆಂಥ ಗಾಢ ಬೆಳಕು, ನೆರಳಲಿರುವ ಜೇನಿನ ಹಾಗೆ.
ನನ್ನ ಪಾರಿವಾಳವೇ, ಭೂಮಂಡಲವೇ, ನನಗೆ ನೀನೆ ಭೂಮಿ, ನೀನೇ ಗ್ರಹತಾರೆ
ಉರಿಯುವ ನಿನ್ನ ಮೈಮೇಲೆ ಮುತ್ತಿಡುತ್ತ ಸಂಚರಿಸುತ್ತೇನೆ ನಾನು ಹೀಗೆ.

## ಸಾನೆಟ್ 39

ಆದರೆ ನಾನು ಮರೆತೆ, ಬೇರುಗಳಿಗೆ ನೀರುಣಿಸಿದ್ದು ನಿನ್ನ ಕೈಗಳೆಂಬುದನ್ನು,
ನಿನ್ನ ಬೆರಳ ಗುರುತುಗಳನ್ನು ತಳೆದು ಹೂರಾಶಿ
ಸಹಜ ಸಮೃದ್ಧ ಶಾಂತವಾಗಿ ಅರಳಿ ನಿಲ್ಲುವವರೆಗೆ
ಹೆಣೆದುಕೊಂಡ ಗುಲಾಬಿಗಳಿಗೆ ಜೀವಕೊಟ್ಟಿದ್ದು ನೀನೆ ಎಂದು ಮರೆತೆ ನಾನು

ನಿನ್ನ ಕಳೆಗುದ್ದಲಿ, ನೀರುಣಿಸುವ ಕ್ಯಾನುಗಳು ನೀನೇ ಸಾಕಿದ ಮುದ್ದುಪ್ರಾಣಿಗಳಂತೆ.
ಒಂದು ನೆಲವನ್ನು ಕಚ್ಚುತ್ತದೆ, ಮತ್ತೊಂದು ನೆಲವನ್ನು ನೆಕ್ಕುತ್ತದೆ,